# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 993 |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಮಾನ್ಯ ಡಾ॥ ಕೆ. ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು |
| ಉತ್ತರಿಸಬೇಕಾದ ದಿನಾಂಕ | : | 21.12.2021 |
| ಉತ್ತರಿಸುವವರು | : | ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ನಗರ ಸೇರಿದಂತೆ ರಾಜ್ಯದ ನಗರಗಳಲ್ಲಿರುವ ಹಿರಿಯ ನಾಗರಿಕರ ಸಂಖ್ಯೆಯ ಅಂದಾಜು ಸರ್ಕಾರಕ್ಕಿದೆಯೇ; (ನಗರವಾರು ಪ್ರತ್ರೇಕ ಮಾಹಿತಿ ಒದಗಿಸುವುದು) | • 2011ರ ಜನಗಣತಿ ಪ್ರಕಾರ ಕರ್ನಾಟಕ ರಾಜ್ಯದಲ್ಲಿ 57,91,032 ಹಿರಿಯ ನಾಗರಿಕರು ಇರುತ್ತಾರೆ. ಇವರಲ್ಲಿ ಶೇ.32.71 ರಷ್ಟು ಅಂದರೆ 18,93,963 ಹಿರಿಯ ನಾಗರಿಕರು ನಗರ ಪ್ರದೇಶಗಳಲ್ಲಿ ಇರುತ್ತಾರೆ.<br>• ನಗರ ಪ್ರದೇಶಗಳಲ್ಲಿ ಇರುವ ಹಿರಿಯ ನಾಗರಿಕರ ಮಾಹಿತಿಯನ್ನು **ಅನುಬಂಧ-1**ರಲ್ಲಿ ಲಗತ್ತಿಸಿದೆ. |
| ಆ | ಜೀವನದ ಸಂಧ್ಯಾ ಕಾಲದಲ್ಲಿ ವೃದ್ಧಾಪ್ಯ ಜೀವಗಳು ಅನುಭವಿಸುತ್ತಿರುವ ಅಭದ್ರತೆ, ಅಸುರಕ್ಷತೆ, ದೌರ್ಜನ್ಯ, ಅನಾರೋಗ್ಯ ಜೀವನ ಮುಂತಾದ ಸಮಸ್ಯೆಗಳು ಬಗ್ಗೆ ಸರ್ಕಾರವು ಗಂಭೀರವಾಗಿ ಆಲೋಚಿಸಿದೆಯೇ: | ಜೀವನದ ಸಂಧ್ಯಾ ಕಾಲದಲ್ಲಿ ವೃದ್ಧಾಪ್ಯ ಜೀವಗಳು ಅನುಭವಿಸುತ್ತಿರುವ ಅಭದ್ರತೆ, ಅಸುರಕ್ಷತೆ, ದೌರ್ಜನ್ಯ, ಅನಾರೋಗ್ಯ ಜೀವನ ಮುಂತಾದ ಸಮಸ್ಯೆಗಳು ಬಗ್ಗೆ ಸರ್ಕಾರವು ಗಂಭೀರವಾಗಿ ಆಲೋಚಿಸಿದ್ದು, ಇವರ ಕ್ಷೇಮಾಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ. ಈ ನಿಟ್ಟಿನಲ್ಲಿ ಸರ್ಕಾರವು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರಗಳನ್ನು **ಅನುಬಂಧ-2**ರಲ್ಲಿ ಲಗತ್ತಿಸಿದೆ. |
| ಇ | ಹಿರಿಯ ನಾಗರಿಕ ಸಂಧ್ಯಾ ಕಾಲದ ಜೀವನವನ್ನು ನೆಮ್ಮದಿಯಾಗಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳು ಏನು? (ಸಂಪೂರ್ಣ ವಿವರ ಒದಗಿಸುವುದು) | |

ಸಂ: ಮಮಇ 281 ಪಿಹೆಚ್.ಪಿ 2021

Halappa BA

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ
ನಾಗರಿಕರ ಸಬಲೀಕರಣ ಸಚಿವರು

| ಅನುಬಂಧ-1 | | | | | | | | | | |
|---|---|---|---|---|---|---|---|---|---|---|
| ಮಾನ್ಯ ಡಾ|| ಕೆ. ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಪ್ರಶ್ನೆ ಸಂಖ್ಯೆ:993ಕ್ಕೆ ಉತ್ತರ | | | | | | | | | | |
| **Senior Citizens Survey Report 2011 Censes in Karnataka State** | | | | | | | | | | |
| **Sl No.** | **District-Name** | **Total** | | | **Rural** | | | **Urban** | | |
| | | **Persons** | **Males** | **Females** | **Persons** | **Males** | **Females** | **Persons** | **Males** | **Females** |
| 1 | Bagalkot | 168890 | 76248 | 92642 | 118525 | 52986 | 65539 | 50365 | 23262 | 27103 |
| 2 | Bangalore | 722578 | 365864 | 356714 | 65793 | 32894 | 32899 | 656785 | 332970 | 323815 |
| 3 | Bangalore Rural | 101168 | 49949 | 51219 | 81581 | 40395 | 41186 | 19587 | 9554 | 10033 |
| 4 | Belgaum | 483958 | 227341 | 256617 | 371137 | 174277 | 196860 | 112821 | 53064 | 59757 |
| 5 | Bellary | 182156 | 81628 | 100528 | 117608 | 52523 | 65085 | 64548 | 29105 | 35443 |
| 6 | Bidar | 173723 | 81793 | 91930 | 144261 | 67620 | 76641 | 29462 | 14173 | 15289 |
| 7 | Bijapur | 198261 | 95440 | 102821 | 159605 | 76827 | 82778 | 38656 | 18613 | 20043 |
| 8 | Chamarajanagar | 117813 | 57390 | 60423 | 102096 | 49940 | 52156 | 15717 | 7450 | 8267 |
| 9 | Chikkaballapura | 132581 | 65249 | 67332 | 111178 | 54938 | 56240 | 21403 | 10311 | 11092 |
| 10 | Chikmagalur | 122246 | 57991 | 64255 | 102353 | 48553 | 53800 | 19893 | 9438 | 10455 |
| 11 | Chitradurga | 167841 | 82656 | 85185 | 142110 | 70114 | 71996 | 25731 | 12542 | 13189 |
| 12 | Dakshina Kannada | 207055 | 93344 | 113711 | 110761 | 51062 | 59699 | 96294 | 42282 | 54012 |
| 13 | Davanagere | 180049 | 86113 | 93936 | 131195 | 62265 | 68930 | 48854 | 23848 | 25006 |
| 14 | Dharwad | 173767 | 82759 | 91008 | 80554 | 38634 | 41920 | 93213 | 44125 | 49088 |
| 15 | Gadag | 101044 | 45759 | 55285 | 67284 | 30491 | 36793 | 33760 | 15268 | 18492 |
| 16 | Gulbarga | 214776 | 100209 | 114567 | 156950 | 72036 | 84914 | 57826 | 28173 | 29653 |
| 17 | Hassan | 209808 | 97271 | 112537 | 178538 | 82447 | 96091 | 31270 | 14824 | 16446 |
| 18 | Haveri | 141138 | 68988 | 72150 | 114281 | 56026 | 58255 | 26857 | 12962 | 13895 |
| 19 | Kodagu | 57774 | 26704 | 31070 | 50676 | 23398 | 27278 | 7098 | 3306 | 3792 |
| 20 | Kolar | 154857 | 74908 | 79949 | 118260 | 57551 | 60709 | 36597 | 17357 | 19240 |
| 21 | Koppal | 114013 | 50110 | 63903 | 97705 | 42860 | 54845 | 16308 | 7250 | 9058 |
| 22 | Mandya | 214369 | 99438 | 114931 | 188668 | 87333 | 101335 | 25701 | 12105 | 13596 |
| 23 | Mysore | 302368 | 146192 | 156176 | 191025 | 91709 | 99316 | 111343 | 54483 | 56860 |
| 24 | Raichur | 139496 | 60881 | 78615 | 108205 | 46825 | 61380 | 31291 | 14056 | 17235 |
| 25 | Ramanagara | 132692 | 63839 | 68853 | 113200 | 54469 | 58731 | 19492 | 9370 | 10122 |
| 26 | Shimoga | 165386 | 77222 | 88164 | 110882 | 51318 | 59564 | 54504 | 25904 | 28600 |
| 27 | Tumkur | 318448 | 155004 | 163444 | 269125 | 130889 | 138236 | 49323 | 24115 | 25208 |
| 28 | Udupi | 154782 | 68172 | 86610 | 112032 | 49136 | 62896 | 42750 | 19036 | 23714 |
| 29 | Uttara Kannada | 145646 | 68354 | 77292 | 104543 | 49086 | 55457 | 41103 | 19268 | 21835 |
| 30 | Yadgir | 92349 | 40256 | 52093 | 76938 | 33531 | 43407 | 15411 | 6725 | 8686 |
| **TOTAL** | | **5791032** | **2747072** | **3043960** | **3897069** | **1832133** | **2064936** | **1893963** | **914939** | **979024** |

## ಅನುಬಂಧ-2

**ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿಗಾಗಿ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳು**

- ಹಿರಿಯ ನಾಗರಿಕರಿಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಿರಿಯ ನಾಗರಿಕರ ನೀತಿಯನ್ನು ರೂಪಿಸಿದೆ. ಅದರಂತೆ ಈ ಹಿರಿಯ ನಾಗರಿಕರ ನೀತಿಯನುಸಾರ, ಸರ್ಕಾರವು ಹಿರಿಯ ನಾಗರಿಕರಿಗೆ ಸಾಮಾಜಿಕ ಭದ್ರತೆ, ಆರೋಗ್ಯ, ಆಸ್ತಿ ಸಂರಕ್ಷಣೆ ಕ್ಷೇಮಾಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

- **ತಂದೆ, ತಾಯಿಯರ ಮತ್ತು ಹಿರಿಯ ನಾಗರಿಕರ ಪಾಲನೆ-ಪೋಷಣೆ ಮತ್ತು ಕಲ್ಯಾಣ ಅಧಿನಿಯಮ 2007:**

  ರಾಜ್ಯದಲ್ಲಿ ತಂದೆ ತಾಯಿಯರ, ಮತ್ತು ಹಿರಿಯ ನಾಗರಿಕರ ಪಾಲನೆ ಪೋಷಣೆ ಮತ್ತು ಕಲ್ಯಾಣ ಅಧಿನಿಯಮ 2007ನ್ನು ಜಾರಿಗೊಳಿಸಲಾಗುತ್ತಿದೆ. ದೌರ್ಜನ್ಯ, ಶೋಷಣೆ, ವಂಚನೆಗೊಳಗಾದ ಹಾಗೂ ನಿರ್ವಹಣಾ ವೆಚ್ಚದ ಅಗತ್ಯವಿರುವ ಹಿರಿಯ ನಾಗರಿಕರು ನ್ಯಾಯಕ್ಕಾಗಿ ಈ ಅಧಿನಿಯಮದ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿತವಾದ ನಿರ್ವಹಣಾ ನ್ಯಾಯಮಂಡಳಿಯಲ್ಲಿ ವ್ಯಾಜ್ಯಗಳನ್ನು ಹೂಡಬಹುದಾಗಿದ್ದು, ಅರ್ಜಿ ಸಲ್ಲಿಸಿದ 90 ದಿನಗಳ ಒಳಗಾಗಿ ನ್ಯಾಯ ಪಡೆಯಬಹುದಾಗಿರುತ್ತದೆ. ಅಸಾಧಾರಣ ಸಂದರ್ಭಗಳಲ್ಲಿ ನಿರ್ವಹಣಾ ನ್ಯಾಯಮಂಡಳಿಯು ಲಿಖಿತವಾಗಿ ದಾಖಲಿಸಿ, ಒಂದು ಭಾರಿ ಗರಿಷ್ಟ 30 ದಿನಗಳಿಗೆ ಈ ಅವಧಿಯನ್ನು ವಿಸ್ತರಿಸಬಹುದಾಗಿದೆ.

  ➢ ನಿರ್ವಹಣಾ ನ್ಯಾಯ ಮಂಡಳಿಯ ತೀರ್ಪಿನ ವಿರುದ್ದ ಹಿರಿಯ ನಾಗರಿಕರು 60 ದಿನಗಳ ಒಳಗಾಗಿ ಮೇಲ್ಮನವಿ ನ್ಯಾಯ ಮಂಡಳಿಯಲ್ಲಿ ಅಪೀಲನ್ನು ಸಲ್ಲಿಸಬಹುದಾಗಿದೆ. ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿತವಾದ ಮೇಲ್ಮನವಿ ನ್ಯಾಯಮಂಡಳಿಯು ಅಪೀಲು ಸ್ವೀಕರಿಸಿದ ಒಂದು ತಿಂಗಳ ಒಳಗಾಗಿ ವ್ಯಾಜ್ಯವನ್ನು ಪೂರ್ಣಗೊಳಿಸಬೇಕೆಂಬ ನಿಯಮವಿರುತ್ತದೆ.

- **ಹಿರಿಯ ನಾಗರಿಕರ ವೃದ್ಧಾಶ್ರಮ:**

  ರಾಜ್ಯದ 30 ಜಿಲ್ಲೆಗಳಲ್ಲಿ ನಿರ್ಗತಿಕ ಹಿರಿಯ ನಾಗರಿಕರಿಗಾಗಿ ವೃದ್ಧಾಶ್ರಮಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದ್ದು, ಈ ವೃದ್ಧಾಶ್ರಮದಲ್ಲಿ 25 ನಿರ್ಗತಿಕ ಹಿರಿಯ ನಾಗರಿಕರನ್ನು ದಾಖಲಿಸಿಕೊಳ್ಳಲು ಅವಕಾಶವಿದ್ದು, ಒಂದು ವೃದ್ಧಾಶ್ರಮದ ನಿರ್ವಹಣೆಗಾಗಿ ವಾರ್ಷಿಕ ರೂ.8.00ಲಕ್ಷಗಳ ಅನುದಾನವನ್ನು, ಸಿಬ್ಬಂದಿ ವೆಚ್ಚ, ನಿರ್ವಹಣಾ ವೆಚ್ಚ, ಔಷಧಿ, ಕಟ್ಟಡ ಬಾಡಿಗೆ, ವೃತ್ತ ಪತ್ರಿಕೆ ಹಾಗೂ ಇತರೆ ವೆಚ್ಚಗಳಿಗಾಗಿ ಬಿಡುಗಡೆ ಮಾಡಲಾಗುತ್ತಿದೆ. ಅನುದಾನವನ್ನು ಜಿಲ್ಲಾ ಪಂಚಾಯತ್, ಮೂಲಕ ಮಂಜೂರು ಮಾಡಲಾಗುತ್ತಿದೆ.

  ರಾಜ್ಯದ ಪ್ರತಿ ಕಂದಾಯ ಉಪ ವಿಭಾಗದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವೃದ್ಧಾಶ್ರಮಗಳನ್ನು ಪ್ರಾರಂಭಿಸಲಾಗುತ್ತಿದೆ. ಪ್ರಸ್ತುತ 9 ಕಂದಾಯ ಉಪ ವಿಭಾಗಳಲ್ಲಿ ವೃದ್ಧಾಶ್ರಮಗಳನ್ನು ನಡೆಸಲಾಗುತ್ತಿದೆ.

- **ಹಿರಿಯ ನಾಗರಿಕರ ಮಾಸಿಕ ಪೋಷಣಾ ಭತ್ಯೆ:**

  ಹಿರಿಯ ನಾಗರಿಕರ ಸಾಮಾಜಿಕ ಭದ್ರತೆಗಾಗಿ ಬಡತನ ರೇಖೆಗಿಂತ ಕೆಳಗಿರುವ ನಿರ್ಗತಿಕ ಹಿರಿಯ ನಾಗರಿಕರಿಗೆ ಸಂಧ್ಯಾ ಸುರಕ್ಷಾ ಮತ್ತು ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ ಮಾಸಿಕ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಸದರಿ ಯೋಜನೆಯಡಿ 60 ರಿಂದ 64 ವರ್ಷದ ವೃದ್ಧರಿಗೆ ಮಾಸಿಕ ರೂ.600/- ರಷ್ಟು ಹಾಗೂ 65 ಮತ್ತು ಅದಕ್ಕಿಂತ ಮೇಲ್ಪಟ್ಟ ವೃದ್ಧರಿಗೆ ರೂ.1200/-ಗಳನ್ನು ಮಾಸಿಕ ವೃದ್ಧಾಪ್ಯ ವೇತನವನ್ನು ನೀಡಲಾಗುತ್ತಿದೆ.

  ರಾಜ್ಯದಲ್ಲಿ ನವೆಂಬರ್-2021ರ ಮಾಹೆಯ ಅಂತ್ಯಕ್ಕೆ ಒಟ್ಟು **42,35,609** ವೃದ್ದರು ಈ ಪಿಂಚಣಿ ಸೌಲಭ್ಯ ಪಡೆಯುತ್ತಿದ್ದಾರೆ

- **ಹಿರಿಯ ನಾಗರಿಕರಿಗೆ ಗುರುತಿನ ಚೀಟಿ ಯೋಜನೆ:**

  60 ವರ್ಷ ಮತ್ತು ಅದಕ್ಕಿಂತ ಮೇಲ್ಪಟ್ಟ ಹಿರಿಯ ನಾಗರಿಕರು ಸೇವಾ ಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಿ ಗುರುತಿನ ಚೀಟಿಗಳನ್ನು ಪಡೆಯಬಹುದಾಗಿದೆ ಹಾಗೂ ಗುರುತಿನ ಚೀಟಿಯಿಂದ ಹಿರಿಯ ನಾಗರಿಕರಿಗಾಗಿ ಇರುವ ಸೇವಾ ಸೌಲಭ್ಯಗಳನ್ನು ಪಡೆಯಬಹುದಾಗಿದೆ.

- **ರಾಜ್ಯ ಹಿರಿಯ ನಾಗರಿಕರ ಸಹಾಯವಾಣಿ:**

  ಹಿರಿಯ ನಾಗರಿಕರು ಕಿರುಕುಳ, ಹಣಕಾಸಿನ ಶೋಷಣೆ, ಮಾನಸಿಕ ತುಮುಲ ಮತ್ತು ದುರ್ಬಲ ಇಂತಹ ಅನೇಕ ಸಮಸ್ಯೆಗಳ ನಿವಾರಣೆಗಾಗಿ ತುರ್ತು ಸಹಾಯಕ್ಕಾಗಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಆವರಣದಲ್ಲಿ, ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಿಂದ ರಾಜ್ಯದ 30 ಜಿಲ್ಲೆಗಳಲ್ಲಿ ಮಂಜೂರಾತಿ ನೀಡಲಾಗಿದ್ದು, ಪ್ರಸ್ತುತ 28 ಜಿಲ್ಲೆಗಳಲ್ಲಿ ಸಹಾಯವಾಣಿಯನ್ನು ನಡೆಸಲಾಗುತ್ತಿದೆ.

- **ಹಿರಿಯ ನಾಗರಿಕರ ರಾಷ್ಟ್ರೀಯ ಸಹಾಯವಾಣಿ:**

ಉನ್ನತ ತಂತ್ರಜ್ಞಾನ ಹೊಂದಿರುವ ಹಿರಿಯ ನಾಗರಿಕರ ರಾಷ್ಟ್ರೀಯ ಸಹಾಯವಾಣಿ ಸಂಖ್ಯೆ **14567** (ಟೋಲ್ ಸಂಖ್ಯೆ)ನ್ನು 2021–22ನೇ ಸಾಲಿನಿಂದ ಪ್ರಾರಂಭಿಸಲಾಗಿದೆ. ಹಿರಿಯ ನಾಗರಿಕರು ಕಿರುಕುಳ, ಹಣಕಾಸಿನ ಶೋಷಣೆ, ಮಾನಸಿಕ ತುಮುಲ ಮತ್ತು ದುರ್ಬಲ ಇಂತಹ ಅನೇಕ ಸಮಸ್ಯೆಗಳ ನಿವಾರಣೆಗಾಗಿ ತುರ್ತು ಸಹಾಯಕ್ಕಾಗಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರವನ್ನು ಸಂಪರ್ಕಿಸಬಹುದಾಗಿದೆ.

- **ಹಗಲು ಯೋಗಕ್ಷೇಮ ಕೇಂದ್ರಗಳು:**

ರಾಜ್ಯದ 30 ಜಿಲ್ಲೆಗಳಿಗೆ ಹಗಲು ಯೋಗಕ್ಷೇಮ ಕೇಂದ್ರಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಸ್ಥಾಪಿಸಿದ್ದು, ಪ್ರತಿ ಕೇಂದ್ರದಲ್ಲಿ ಸುಮಾರು 50–150 ಫಲಾನುಭವಿಗಳಿರುತ್ತಾರೆ. ಈ ಕೇಂದ್ರಗಳಲ್ಲಿ ಹಿರಿಯ ನಾಗರಿಕರ ತಮ್ಮ ವಿಶ್ರಾಂತ ವೇಳೆಯನ್ನು ಉಪಯುಕ್ತ ಕಾರ್ಯಚಟುವಟಿಕೆಗಳಿಗೆ ಉಪಯೋಗಿಸಿಕೊಳ್ಳುವ ಅವಕಾಶವನ್ನು ಕಲ್ಪಿಸಲಾಗಿದೆ.

- **ಜೇರಿಯಾಟ್ರಿಕ್ ಕೇಂದ್ರಗಳು :**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ 10 ಜಿಲ್ಲೆಗಳಲ್ಲಿ (ಶಿವಮೊಗ್ಗ, ಕೋಲಾರ, ಉಡುಪಿ, ತುಮಕೂರು, ಚಿಕ್ಕಮಗಳೂರು, ಬಾಗಲಕೋಟೆ, ಬೆಳಗಾವಿ, ಧಾರವಾಡ, ವಿಜಯಪುರ, ಕಲಬುರಗಿ) ಜಿಲ್ಲಾಸ್ಪತ್ರೆಗಳಲ್ಲಿ ಹಿರಿಯ ನಾಗರಿಕರಿಗಾಗಿ ಜೇರಿಯಾಟ್ರಿಕ್ ಕೇಂದ್ರಗಳನ್ನು ನಡೆಸಲಗುತ್ತಿದೆ. ಸದರಿ ಕೇಂದ್ರಗಳಲ್ಲಿ ಉಚಿತ / ವೈದ್ಯಕೀಯ ಸೌಲಭ್ಯ ಹಾಗೂ ಚಿಕಿತ್ಸೆಗಳನ್ನು ನೀಡಲಾಗುತ್ತಿದೆ.

- **ರಾಜ್ಯ ಸಾರಿಗೆ ಬಸ್ ಪ್ರಯಾಣದರದಲ್ಲಿ ಶೇ.25 ರಷ್ಟು ರಿಯಾಯಿತಿ:**

ಹಿರಿಯ ನಾಗರಿಕರಿಗೆ ಅವರು ಪ್ರಯಾಣಿಸುವಾಗ ಬಸ್ ಪ್ರಯಾಣದರದಲ್ಲಿ ಶೇ.25 ರಷ್ಟು ರಿಯಾಯಿತಿಯನ್ನು ನೀಡಲಾಗುತ್ತಿದೆ, ಬಸ್‌ಗಳಲ್ಲಿ ಹಿರಿಯ ನಾಗರಿಕರಿಗೆ 2 ಆಸನಗಳನ್ನು ಮೀಸಲಿರಿಸಿದೆ.

- ಕೇಂದ್ರ ಸರ್ಕಾರವು ಸಹ ಹಿರಿಯ ನಾಗರಿಕರಿಗೆ ರೈಲ್ವೆ ಪ್ರಯಾಣ ದರದಲ್ಲಿ ಶೇ.30% ರಷ್ಟು ರಿಯಾಯಿತಿಯನ್ನು ನೀಡಲಾಗುತ್ತಿದೆ.

- ಕೇಂದ್ರ ಸರ್ಕಾರವು ಸಹ ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಹಿರಿಯ ನಾಗರಿಕರಿಗಾಗಿ ವೃದ್ಧಾಶ್ರಮ, ಹಗಲು ಯೋಗಕ್ಷೇಮ ಕೇಂದ್ರ ಸಹಾಯವಾಣಿ ಮೊಬೈಲ್ ಮೆಡಿಕೇರ್ ಸೆಂಟರ್‌ಗಳನ್ನು ರಾಜ್ಯದಲ್ಲಿ ನಿರ್ವಹಿಸುತ್ತಿದೆ.